# ಮಲ್ಲಿಕಾ ಘಂಟಿಯವರ 'ಚಾಜ' ನಾಟಕದಲ್ಲಿ ಸಾಂಸ್ಕೃತಿಕ ಸಂಘರ್ಷ

**ಆರತಿ ಎಸ್.**

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿಸ್ತರಣಾ ಕೇಂದ್ರ ದೇವದುರ್ಗ.

**Received: 20-04-2024 ; Acepted: 03-06-2024 ; Published: 09-07-2024**

**DOI: https://doi.org/10.5281/zenodo.12672754**

**ABSTRACT:**

ಪುರಾತನ ಕಾಲದಿಂದಲೂ ಸಾಮ್ರಾಜ್ಯಶಾಹಿಗಳು, ಪುರುಷಪ್ರಧಾನತೆ ಮತ್ತು ಪುರೋಹಿತಶಾಹಿತ್ವಗಳು ಒಟ್ಟಾಗಿಯೇ ಮಹಿಳೆಯರ ಮೇಲೆ ನೂರಾರು ಕಟ್ಟುಪಾಡುಗಳನ್ನು ಹೇರಿವೆ. ಹೆಣ್ಣು ಒಂದು ವಸ್ತು ಎಂದು ಪುರುಷಪ್ರಧಾನ ವ್ಯವಸ್ಥೆಯ ಧರ್ಮವು ನಿರ್ವಹಿಸುತ್ತದೆ. ಪುರುಷನ ಅಧಿಕಾರ ಸ್ಥಾಪನೆಯ ಕಾರಣದಿಂದ ಅವನೇ ಹುಟ್ಟು ಹಾಕಿದ ಧರ್ಮ, ಕಾನೂನು, ನಿಯಮಗಳು, ಕಟ್ಟುಪಾಡುಗಳು ಹೆಣ್ಣನ್ನು ನಿರ್ದಾಕ್ಷಿಣ್ಯವಾಗಿ ನಡೆಸಿಕೊಳ್ಳುತ್ತವೆ. ಕುಟುಂಬ, ಆಸ್ತಿ, ಉತ್ಪಾದನೆ ಹೀಗೆ ಎಲ್ಲದರ ಮೇಲೆ ಪುರಷಾಧಿಪತ್ಯವೇ ಇರುತ್ತದೆ. ಈ ಕಾರಣದಿಂದಾಗಿ ಬಾಲ್ಯವಿವಾಹ, ಸತಿಪದ್ಧತಿ, ವಿಧವಾ ಸಮಸ್ಯೆ, ದೇವದಾಸಿ ಪದ್ಧತಿ, ಬೆತ್ತಲೆ ಸೇವೆ, ಬಹುಪತ್ನಿತ್ವ, ವರದಕ್ಷಿಣೆ ಮುಂತಾದ ಕ್ರೂರ ಸಂಪ್ರಧಾಯಗಳಿಗೆ ಹೆಣ್ಣನ್ನು ಸಿಲುಕಿಸಿ ಅವಳನ್ನು ನಿರಂತರ ಶೋಷಣೆಗೆ ಒಳಗುಮಾಡಲಾಗಿದೆ. ಮನುಸ್ಮೃತಿ ಮೊದಲಾದ ಕೃತಿಗಳಿಂದ ಹೆಣ್ಣಿನ ಸ್ವಾತಂತ್ರ್ಯಹರಣ ಮಾಡಿ ಪುರುಷಾಧೀನಗೊಳಿಸಲಾಯಿತು. ಇದು ಹೆಣ್ಣನ್ನು ಸಮಾಜದಲ್ಲಿ ಅತ್ಯಂತ ಕನಿಷ್ಠ ಸ್ಥಾನಕ್ಕೆ ಇಳಿಸಲು ಕಾರಣವಾಯಿತು.

ಯಾವುದೇ ಒಂದು ಸಂಸ್ಕೃತಿಯು ಮನುಷ್ಯರನ್ನು ಸದ್ಗುಣಶೀಲರನ್ನಾಗಿ ಮಾಡಬೇಕು, ಅದು ಉತ್ತಮ ಸಂಸ್ಕೃತಿ. ಆದರೆ ಸಮಾಜದಲ್ಲಿ ಹಲವು ಆಚರಣೆ ಪದ್ಧತಿಗಳ ಮೂಲಕ ಜನರನ್ನು ದೌರ್ಜನ್ಯ, ತಾರತಮ್ಯಕ್ಕೆ ಒಳಗಾಗುವಂತೆ ಮಾಡುವ ಕೆಲವು ನಂಬಿಕೆಯ ಆಚರಣೆಗಳು ಹೀನವಾಗಿ ಅಸಹ್ಯವಾಗಿ ಕಂಡುಬರುತ್ತವೆ. ಈ ನಿಟ್ಟಿನಲ್ಲಿ ಮಲ್ಲಿಕಾ ಘಂಟಿಯವರ ಚಾಜ ನಾಟಕವು ಪುರುಷಪ್ರಧಾನತೆಯು ಹೆಣ್ಣನ್ನು ಸಾಂಸ್ಕೃತಿಕತೆಯ ನೆಲೆಯನ್ನು ಬಳಸಿಕೊಂಡು ಅನುಭೋಗಿಸುವ ನಡೆಯನ್ನು ಕಥಾವಸ್ತುವಾಗಿಸಿಕೊಂಡಿದೆ. 'ಚಾಜ' ಎಂದರೆ 'ನಿಯಮ' 'ಪದ್ಧತಿ' ಎಂದರ್ಥ. ವಿಜಾಪುರ ಜಿಲ್ಲೆಯ ತುಂಬಾ ಹಾಗೂ ಉತ್ತರ ಕರ್ನಾಟಕದ ಹೆಚ್ಚಿನ ಹಳ್ಳಿಗಳಲ್ಲಿ ಈ ಚಾಜ ಪದ ಬಳಕೆಯಲ್ಲಿದೆ. ಜಮೀನ್ದಾರಿ ವ್ಯವಸ್ಥೆಯಲ್ಲಿ ಮದುವೆ ನಂತರ ಮನೆಗೆ ಬರಬೇಕಾದ ಸೊಸೆ ಊರ ಗೌಡನ ಅಥವಾ ದೇಸಾಯಿ ಮನೆಯಲ್ಲಿ ಅವನ ತೆಕ್ಕೆಯಲ್ಲಿ ಮೊದಲ ರಾತ್ರಿ ಕಳೆಯಬೇಕಾಗಿತ್ತು. ಅದು ಒಂದು ಚಾಜ. ಹಬ್ಬ ಹರಿದಿನಗಳ ಎಲ್ಲಾ ಕ್ರಿಯೆಗಳು ದೇಸಾಯಿಗಳ ಮನೆಯಲ್ಲಿ ಅವರ ನಾಯಕತ್ವದಲ್ಲಿ ಆರಂಭವಾಗುತ್ತದೆ ಇದೆಲ್ಲ ಚಾಜ.

**KEYWORDS:**

ಬಹುಪತ್ನಿತ್ವ, ವರದಕ್ಷಿಣೆ, ರಮೇಶ, ಕುಲಕರ್ಣಿ, ಚಾಜ, ದ್ವೇಷ, ಸಾಂಸ್ಕೃತಿಕ ಸಂಘರ್ಷ, ದೇಸಾಯಿ.

ಇದು ಸಾಮಂತ ಶಾಹಿ, ಪುರೋಹಿತ ಶಾಹಿಗಳು ನಿರ್ಮಿಸಿದ ಸಂಸ್ಕೃತಿ. 'ಚಾಜ' ಪದ ಕೆಲವೇ ಕಡೆ ಬಳಕೆಯಲ್ಲಿದ್ದರೂ ಅದರ ಅರ್ಥದ ಕ್ರಿಯೆ ದೇಶದ ತುಂಬ ಇದೆ. ಅದನ್ನು ಈ ನಾಟಕ ತೋರಿಸುತ್ತದೆ. "ಅಸ್ತಮಾನದ ಸಾಮಂತಶಾಹಿ, ವರ್ತಮಾನದ ಬಂಡವಾಳಶಾಹಿ ಹಿತಾಸಕ್ತಿಗಳು ರಾಜಕೀಯ, ಧಾರ್ಮಿಕ ಅಧಿಕಾರಕ್ಕಾಗಿ 'ಚಾಜ'ದ ಹೆಸರಿನಲ್ಲಿ ನಡೆಸಿದ ತಿಕ್ಕಾಟ ಈ ನಾಟಕದಲ್ಲಿದೆ"[1] ಎಂದು ಈ ನಾಟಕದ ಕಥಾವಸ್ತುವಿನ ಕುರಿತು ಸಿದ್ದನಗೌಡ ಪಾಟೀಲರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

'ಚಾಜ' ನಾಟಕ ದಲಿತ-ಬಂಡಾಯ ಧೋರಣೆಗಳನ್ನು ಅಳವಡಿಸಿಕೊಂಡು ಜಮೀನ್ದಾರಿ ವ್ಯವಸ್ಥೆಯಿಂದ ಬಂಡವಾಳಶಾಹಿ ವ್ಯವಸ್ಥೆಯತ್ತ ಹೊರಳುತ್ತಿದ್ದ ಸಮಾಜದಲ್ಲಿ ನಡೆದ ಸಂಕ್ರಮಣ ಕಾಲದ ಸಾಂಸ್ಕೃತಿಕ ಸಂಘರ್ಷವನ್ನು ಎತ್ತಿ ತೋರಿಸುವುದು. ಹಾಗೆಯೇ ಇದರ ಮೂಲಕ ಆಗಿನ ಸಾಮಾಜಿಕ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಬದುಕಿನಲ್ಲಿ ನಡೆದ ಸಂಘರ್ಷಗಳು ಮತ್ತು ಅದರಿಂದ ಉಂಟಾದ ಪರಿಣಾಮಗಳನ್ನು ಬಿಚ್ಚಿಡುವುದು ಈ ನಾಟಕದ ಪ್ರಮುಖ ಆಶಯವಾಗಿದೆ.

ಜಾಮೀನ್ದಾರಿ ವ್ಯವಸ್ಥೆಯ ನೇತಾರರಾದ ದೇಸಾಯಿ, ಕುಲಕರ್ಣಿಯವರು ದಲಿತರ ಮತ್ತು ದುಡಿಯುವವರ ಮೇಲೆ ನಡೆಸುತ್ತ ಬಂದ ದೌರ್ಜನ್ಯವನ್ನು ಹಾಗೂ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಗಂಡು ಹೆಣ್ಣಿನ ಮೇಲೆ ಸಡೆಸುತ್ತ ಬಂದ ಶೋಷಣೆ ದೌರ್ಜನ್ಯಗಳು ನಿರಂತರವಾಗಿರುತ್ತವೆ. ಹಿಂದಿನಿಂದ ನಡೆದುಬಂದ ಈ ಜಡಗಟ್ಟಿದ ವ್ಯವಸ್ಥೆಗಳನ್ನು ಒಡೆದು ಹಾಕಲು ದಲಿತ ಯುವಕ ರಮೇಶ ಮುಂದೆ ಬರುವನು. ಅದು ಸಮಾಜ ರಚನೆಯ ಪ್ರತೀಕಗಳಾದ ಮಂಡಲ ಪಂಚಾಯ್ತಿ, ಜಿಲ್ಲಾ ಪರಿಷತ್ತು, ಮೀಸಲಾತಿ ಮೊದಲಾದ ಸಹಾಯಗಳನ್ನು ಬಳಸಿಕೊಂಡು ಅಧಿಕಾರ ಸೂತ್ರವನ್ನು ತನ್ನ ಕೈಯಲ್ಲಿ ಹಿಡಿಯುತ್ತಾನೆ. ದೇಸಾಯಿ ನಡೆಸುತ್ತಾ ಬಂದ 'ಚಾಜ'ದಂತಹ ನಿಯಮಗಳನ್ನು ಮುರಿದು ಹಾಕುತ್ತಾನೆ. ಆದರೆ ಅಧಿಕಾರದ ಅಮಲು ಮತ್ತು ಪ್ರತೀಕಾರದ ದ್ವೇಷದಿಂದ ಅದೇ ದಲಿತ ನಾಯಕ ಮತ್ತೊಬ್ಬ ದೇಸಾಯಿಯಾಗಿ ಶೋಷಿಸಲು ಮುಂದಾಗುವುದು ದುರಂತವೆನಿಸುತ್ತದೆ. ಹಾಗೆಯೇ ಈ ಎಲ್ಲಾ ದುರಂತಗಳನ್ನು ತಡೆಯಲು ದಲಿತರ ಬಸವಣ್ಣ , ಕಲ್ಲಿ, ದುರುಗ, ದೇಸಾಯಿಯ ಕಿರಿಯ ಹೆಂಡತಿ ಸಾವಿತ್ರಿ ಮುಂತಾದವರು ಕೈ ಜೋಡಿಸುತ್ತಾರೆ. ನಾಟಕದಲ್ಲಿ ಕೆಳವರ್ಗದ ಜನರು ಜಮೀನ್ದಾರಿ ವ್ಯವಸ್ಥೆಯ ಶೋಷಣೆಗೆ ಒಳಗಾಗಿ, ಅವರು ಹೇರಿರುವ ವೈದಿಕಶಾಹಿ ಸಂಸ್ಕೃತಿಯನ್ನು ಆಚರಣೆ ಮಾಡುತ್ತಿರುತ್ತಾರೆ. ಇದನ್ನು ಪರಂಪರೆಯ ಹೆಸರಿನಲ್ಲಿ ಸಂಸ್ಕೃತಿಯ ಆಚರಣೆಯ ನೆಪದಲ್ಲಿ ಒತ್ತಾಯ ಪೂರ್ವಕವಾಗಿಯೇ ಹೇರಿರುವುದನ್ನು ನಾಟಕ ತೋರಿಸುತ್ತದೆ.

ಮೇಲ್ವರ್ಗದ ಜನತೆಯು ಕೆಳವರ್ಗದ ಜನತೆಯನ್ನು ನಡೆಸಿಕೊಳ್ಳುವ ರೀತಿಯನ್ನು ಈ ನಾಟಕದಲ್ಲಿ ಗಮನಿಸುವುದಾದರೆ, ವಾಡೆಯಲ್ಲಿ ದೇಸಾಯಿಯು ತನ್ನ ಸಹಚರರೊಂದಿಗೆ ಮಾತನಾಡುತ್ತಾ ಕುಳಿತಿರುವಾಗ ದುರಗ ಎಂಬ ಕೆಳವರ್ಗದ ಆಳು ಮುದುಕ ಬಂದು ನಡು ಬಗ್ಗಿಸಿ

ದುರಗ: (ಹೆದರಿಕೆಯಿಂದ ಕುಲಕರ್ಣಿಯತ್ತ ಒಮ್ಮೆ ನೋಡಿ ಅದೇ ಕಣ್ಣಲ್ಲಿ ದೇಸಾಯಿಯತ್ತ ಹೊರಳಿ) ಎಪ್ಪಾ ಧನೇರ

ಆ ಕುರುಬರ ಬೀರಪ್ಪಜ್ಜ ಬಂದಾನ್ರೀ ತಮ್ಮನ್ನು ಕಾಣಾಕಂತಾ.

ಕುಲಕರ್ಣಿ: ಯಾರಿಗೇ ಹ್ಯಾಂಗ ಮಾತನಾಡಬೇಕು, ಸಂಭೋದಿಸಬೇಕು ಅನ್ನೊದ ಈ ಅರಿಷ್ಟ ಮುಂಡೇವಕ ಮುದಕರಾದ್ರು ತಿಳಿಯುವುದಿಲ್ಲ. ದೊರೆಗಳನ್ನು ತಂದೆ, ಅಪ್ಪಾರನ್ನ ಕಾಣಾಕಂತ ಕಾಣಾಕ, ದರ್ಶನಕ್ಕೆ , ದರ್ಶನಕ್ಕೆ ಅಂತ ಹೇಳಾಕ ದನಾ ತಿನ್ನು ನಾಲಿಗಿ ಹೊಳ್ಳ ಅಂದ್ರ ಹ್ಯಾಂಗ ಹೊಳ್ಳಿತ. ಅಪಚಾರ, ಅಪಚಾರ...”[2]

ಎಂದು ಕೆಳವರ್ಗದ ವ್ಯಕ್ತಿಗೆ ಮೇಲ್ವರ್ಗದ ವ್ಯಕ್ತಿ ತುಚ್ಚವಾಗಿ ಮಾತನಾಡುತ್ತಾನೆ. ವಿಚಾರ ತಿಳಿದ, ಅಕ್ಷರವಂತ ಮೇಲ್ವರ್ಗದ ವ್ಯಕ್ತಿಯೇ ಕೆಳವರ್ಗದವರ ಆಚಾರ-ವಿಚಾರ, ಆಹಾರ ಸಂಸ್ಕೃತಿಯ ಕುರಿತಾಗಿ ಅವಹೇಳನಕಾರಿಯಾಗಿ ಮಾತನಾಡುವುದು ಕೆಳವರ್ಗದ ಸಂಸ್ಕೃತಿಗೆ ಮಾಡಿದ ಅವಮಾನವೇ ಆಗಿದೆ. ಆದರೆ ದೇಸಾಯಿಗೆ ಕುಲಕರ್ಣಿಯ ಈ ಮಾತಿನಿಂದ ಬೇಸರವಾಗಿ:

ದೇಸಾಯಿ: ಏ ಕುಲಕರ್ಣಿ ಯಾಕ ಒಟಗುಡತಿ ಕಪ್ಪೆಯಂಗ, ನಿನ್ನಂಗ ಅವರೇನ ಓದಿ ಬರದವರಲ್ಲ. ಮೇಲಾಗಿ ತುಪ್ಪದಾಗ ಕೈ ತೊಳದವರು ಅಲ್ಲ. ನೀವು ಮೇವು ತರಲಿಲ್ಲ, ದನಾ ಕಾಯಲಿಲ್ಲ. ಆದ್ರು ಊಟಕ್ಕೆ ತುಪ್ಪ, ಹಾಲು, ಮಜ್ಜಿಗಿ ಇಲ್ಲದ ಮ್ಯಾಲಕ್ಕ ಏಳುದಿಲ್ಲ. ಹಂಗ ನೋಡಿದ್ರ ಹಾಲು ತುಪ್ಪಾ ತಿಂದ ನೀವು ದೇಶಾ ಆಳುವವರಿಗೆ ಮೂಗುದಾರ ಹಾಕಿದ್ರಿ. ಆದ್ರ ಹಾಲು ತುಪ್ಪ ನೀಡೋ ದನಾ ತಿಂದ ಮಂದಿ ಯಾಕ ಹಿಂಗಾದ್ರು ಅನ್ನೋದ ತಿಳಿವಲ್ಲದ ನೋಡ ಕುಲಕರ್ಣಿ”[3]

ಎಂದು ಮೇಲ್ಜಾತಿಯವರ ಆಹಾರ ಸಂಸ್ಕೃತಿಯ ಹಿಂದಿರುವ ಹುನ್ನಾರಗಳನ್ನು ಬಿಚ್ಚಿಡುವನು. ದನಾ ಮೇಯಿಸಿ ಅದರ ಹಾಲನ್ನು ಮೇಲ್ವರ್ಗದ ಜನತೆಗೆ ನೀಡುವ ಕೆಳವರ್ಗ ದಡ್ಡರಾದರು ಹಾಗೆಯೇ ದನದ ಮಾಂಸ ಸೇವಿಸುವವರು ಎಂದು ಅವರನ್ನು ಊರಿನಿಂದ ಹೊರಗಿಡಲಾಯಿತು. ಹಾಲುತುಪ್ಪ ತಿನ್ನುವವರನ್ನು ದೇವರ ಪೂಜೆಗೆ, ಅಧಿಕಾರಕ್ಕೆ ಏರಿಸಲಾಯಿತು ಎಂಬುದನ್ನು ದೇಸಾಯಿಯ ಮಾತು ವಿವರಿಸುತ್ತದೆ.

ಆದರೆ ದೇಸಾಯಿಯ ಮಾತುಗಳಿಂದ ಕೋಪಗೊಂಡ ಕುಲಕರ್ಣಿ ಆಹಾರದಲ್ಲಿ ಅಕ್ಷರವಿರುವುದಿಲ್ಲ. ಮನುಷ್ಯನಿಗೆ ಸಂಸ್ಕಾರ ಮುಖ್ಯ ಎನ್ನುವನು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹಸುವಿನ ಹಾಲು, ತುಪ್ಪ, ಮೊಸರು ಮನುಷ್ಯನ ಆರೋಗ್ಯಕ್ಕೆ ಬಹಳ ಅವಶ್ಯಕ, ಜ್ಞಾಪಕ ಶಕ್ತಿಗೆ ಉಪಕಾರಿ. ಆದರೆ ದನದ ಮಾಂಸಾಹಾರ ಹೆಚ್ಚು ಪೋಷಕಾಂಶಗಳನ್ನು ಹೊಂದಿದ್ದು ಜೀರ್ಣಕ್ರಿಯೆ ತಡವಾಗುವುದು ಮತ್ತು ಹೆಚ್ಚು ಕೊಬ್ಬಿನ ಅಂಶದ ಕಾರಣ ತಿಂದಾಗ ಮಬ್ಬು ಎನಿಸುತ್ತದೆ. ಇದಕ್ಕೆ ಬಳಸುವ ಮಸಾಲೆ ಪದಾರ್ಥಗಳು ನಾಲಿಗೆಯ ತೆಳುತನವನ್ನು ಗಡಸು ಮಾಡುತ್ತದೆ. ಇಲ್ಲಿ ಆಹಾರ ಸಂಸ್ಕೃತಿಯ ಸಂಘರ್ಷವನ್ನು ಗುರುತಿಸಬಹುದು.

ದಲಿತ ತಳಸಮುದಾಯಗಳ ಮೇಲೆ ಸವರ್ಣೀಯರು ಹಿಂದಿನ ಕಾಲದಿಂದಲೂ ನಿರಂತರವಾಗಿ ಧಾರ್ಮಿಕ ಕಟ್ಟುಪಾಡುಗಳು, ನೀತಿ ನಿಯಮಗಳನ್ನು ಹೇರುತ್ತಾ ಬಂದಿದ್ದಾರೆ. ಇದು ಈ ನಾಟಕದಲ್ಲಿ ಬಿಂಬಿತವಾಗಿರುವುದನ್ನು ಗುರುತಿಸುವುದಾದರೆ ದೇಸಾಯಿಯ ಬಳಿ ಕುರುಬರ ಬೀರಜ್ಜ ಬಂದು ತನ್ನ ಕೆಲಸದ ವಾರ್ತೆಯನ್ನು ತಿಳಿಸುತ್ತಾ ತನ್ನ ಕಿರಿಯ ಮಗನ ಹೆಂಡತಿಯನ್ನು ಮೈನೆರೆದ ಕಾರಣ ತವರಿನಿಂದ ಕರೆತರಲು ದಿನವನ್ನು ನಿಶ್ಚಯಿಸಿರುವುದಾಗಿ

ತಿಳಿಸುತ್ತಾನೆ. ಏಕೆಂದರೆ ಮದುವೆಯಾದ ಆ ಊರಿನ ಪ್ರತಿಯೊಂದು ಹೆಣ್ಣು ದೇಸಾಯಿಯೊಂದಿಗೆ ಮೊದಲ ರಾತ್ರಿ ಕಳೆಯಬೇಕು ಎಂಬ 'ಚಾಜ'ದ ನಿಯಮವನ್ನು ಪಾಲಿಸಬೇಕಿದೆ. ಇದನ್ನು ಸಂಪ್ರದಾಯವೂ, ಪರಂಪರೆಯೂ ಎನ್ನುವ ಹಾಗೆ ಸಾಂಸ್ಕೃತಿಕವಾಗಿ ನೋಡಲಾಗಿರುತ್ತದೆ. ದೇಸಾಯಿಯು ತಳವಾರನಿಗೆ "ಆ ಕಲ್ಲಿಗೆ ಹೇಳು, ಬೀರಪ್ಪನ ಸೊಸಿನ ಬಸು ಜಯಂತಿ ದಿವಸ ಕರಕೊಂಡ ಬರತಾನಂತ. ಒಂದು ಸೀರಿ, ಕುಬಸಾ ಉಡಿ ತುಂಬು ಸಾಮಾನು ಸಜ್ಜ ಮಾಡಾಕ ಹೇಳು. ಅವರ ಮನಿಗೆ ಹಿಟ್ಟು ಅಕ್ಕಿ , ಚಾಜ ಕಳಸೊದ ಕಳಸಾಕ ಹೇಳು"[4] ಎಂದು ಆದೇಶಿಸುವನು. ಇಲ್ಲಿ ನವ ವಿವಾಹಿತೆಗೆ ತನ್ನ ಸಂಗಾತಿಯೊಂದಿಗೆ ಮೊದಲ ರಾತ್ರಿಯ ಕನಸು ಕಾಣಲು ಸಹ ಹಕ್ಕಿಲ್ಲ. ತನ್ನ ತನುಮನವನ್ನು ಸಂಗಾತಿಗೆ ಅರ್ಪಿಸಲು ಸಿದ್ಧಳಿದ್ದಾಗ ಈ 'ಚಾಜ'ವು ದುಸ್ವಪ್ನವೇ ಆಗಿರುತ್ತದೆ. ದೇಸಾಯಿಯೊಂದಿಗೆ ಮೊದಲ ರಾತ್ರಿ ಕಳೆದ ಮೇಲೆ ಅವಳಿಗೆ ಸೀರೆ, ಕುಬಸಾ ಉಡಿ ತುಂಬಿ, ದಿನಸಿ ನೀಡಲಾಗುತ್ತದೆ. ಆದರೆ ಒಂದು ಹೆಣ್ಣಿನ ಶೀಲ ಮತ್ತು ಮರ್ಯಾದೆಗೆ ಬೆಲೆ ಇವಿಷ್ಟೇ ಆಗಿದೆ. ಆ ದಿನದ ನಂತರದ ಅವಳ ಸ್ಥಿತಿಯನ್ನು ಮಾನಸಿಕ ವೇಧನೆಯನ್ನು ಯಾರು ಪರಿಗಣಿಸದೇ ಹೋಗುವುದು ವಿಪರ್ಯಾಸ. ತನ್ನ ಹೆಂಡತಿ, ಮಗಳು, ಸೊಸೆಯನ್ನು ಈ ನೀಚ ಸಂಸ್ಕೃತಿಯ ಹೆಸರಿನಲ್ಲಿ ಮತ್ತೊಬ್ಬನಿಗೆ ನೀಡುವ ಕೃತ್ಯವನ್ನು ಕೆಳವರ್ಗದವರು ಪ್ರಯತ್ನಿಸಿದರೂ ತಡೆಯಲು ಸಾಧ್ಯವಾಗುವುದಿಲ್ಲ. ಬಡತನದ ಕಾರಣದಿಂದ ಎಲ್ಲವನ್ನೂ ಒಪ್ಪಿಕೊಳ್ಳುತ್ತಾರೆ. ಒಂದು ವೇಳೆ ಪ್ರತಿಭಟಿಸಿದರೂ ಅದರಿಂದ ಉಂಟಾಗಬಹುದಾದ ದೌರ್ಜನ್ಯ, ಮಾರಣಾಂತಿಕ ಹಲ್ಲೆ, ಉಪವಾಸ, ಬಹಿಷ್ಕಾರಗಳಂತ ಶಿಕ್ಷೆಗೆ ಹೆದರುತ್ತಾರೆ. ಆದರೆ ಇದು ಒಂದು ಹೆಣ್ಣಿನ ಮಾನಕ್ಕೆ , ಆತ್ಮಗೌರವಕ್ಕೆ ಸಂಬಂಧಿಸಿದ ವಿಷಯವೆಂಬುದನ್ನು ಪುರುಷಪ್ರಧಾನ ವ್ಯವಸ್ಥೆ ಮರೆತಂತಿದೆ. ಏಕೆಂದರೆ ಹೆಣ್ಣನ್ನು ತನ್ನ ಆಸ್ತಿಯನ್ನಾಗಿ, ಎರಡನೇ ದರ್ಜೆಯಲ್ಲಿ ಗುರುತಿಸಿರುವುದು ಅದೇ ಪುರುಷಪ್ರಧಾನತೆಯೇ ಆಗಿದೆ.

ಆದರೆ 'ಚಾಜ'ದ ಆಚರಣೆಯ ಸಂದರ್ಭದಲ್ಲಿ ಕಲ್ಲಿ ಮತ್ತು ದುರಗ ಊರ ಹೆಣ್ಣು ಮಕ್ಕಳ ಮಾನವನ್ನು ಕಾಪಾಡುತ್ತಿರುತ್ತಾರೆ. ಇದಕ್ಕೆ ದೇಸಾಯಿಯ ಹೆಂಡತಿ ರುದ್ರಮ್ಮಳು ಸಹ ಸಹಾಯ ಮಾಡುತ್ತಿರುತ್ತಾಳೆ. ಕಲ್ಲಿ ಮತ್ತು ದುರಗ 'ಚಾಜಾ'ದ ದಿನ ದೇಸಾಯಿ ಸೇದುವ ತಂಬಾಕಿನಲ್ಲಿ ಗಾಂಜಾವನ್ನು ಸೇರಿಸಿ ನಿದ್ರೆ ಬರಿಸಿ ಮಲಗಿಸುತ್ತಿದ್ದರು. ನಂತರ ಹನುಮಪ್ಪನ ಗುಡಿ ಮುಂದೆ ಉಡಿತುಂಬಿಸಿ ಆ ಹೆಣ್ಣನ್ನು ಕಳುಹಿಸುತ್ತಿದ್ದರು. ಇದನ್ನು ಬಹಳ ಗುಟ್ಟಿನಲ್ಲಿ ಎಚ್ಚರಿಕೆಯಿಂದ ಪ್ರಾಣದ ಹಂಗನ್ನೂ ತೊರೆದು ಮಾಡಲಾಗುತ್ತಿತ್ತು. ಮಂಪರಿನಲ್ಲಿದ್ದ ದೇಸಾಯಿಗೆ ಇದಾವುದರ ಅರಿವೂ ಇರುತ್ತಿರಲಿಲ್ಲ. ಪ್ರತಿ ಹೆಣ್ಣನ್ನು ದುರಾಸೆಯಿಂದ ಬಯಸುವ ದೇಸಾಯಿ ತನ್ನ ಹೆಂಡತಿ ರುದ್ರಮ್ಮ ಮಕ್ಕಳಿಲ್ಲವೆಂದು ಕೊರಗುವಂತೆ ಮಾಡಿರುವನು. ತನ್ನ ಗಂಡ ಮತ್ತೊಬ್ಬ ಹೆಣ್ಣಿನ ಜೊತೆ ಇರುವುದನ್ನು ಸಹಿಸಲಾರಳು. ಆದರೆ ಪತಿವ್ರತೆ ಆಚರಣೆಯ ಕಾರಣದಿಂದಾಗಿ ಗಂಡನಿಗೆ ಪ್ರತಿಯಾಗಿ ಮಾತನಾಡದೆ ಎಲ್ಲ ನೋವನ್ನು ಸಹಿಸಿಕೊಂಡಿರುವಳು. ತನ್ನ ಗಂಡನಿಂದ ಕೆಳವರ್ಗದ ಹೆಣ್ಣು ಮಕ್ಕಳಿಗೆ ಆಗುತ್ತಿರುವ ಅನ್ಯಾಯವನ್ನು ನೇರವಾಗಿ ಎದುರಿಸಲು ಸಾಧ್ಯವಾಗದಿದ್ದರೂ ಸಹ ಮರೆಯಲ್ಲಿ ನಿಂತು ಕಾಪಾಡಲು ಸಹಾಯ ಮಾಡುತ್ತಾಳೆ. ಗಂಡನಿಂದ ಮಗುವಾಗದು ಎಂದು ತಿಳಿದರೂ ಸಹ ಮಗುವಾಗದಿರುವುದಕ್ಕೆ ತಾನೇ ಕಾರಣ ಎಂದು ಗಂಡನಿಗೆ

ಮತ್ತೊಂದು ವಿವಾಹ ಮಾಡಿಸುತ್ತಾಳೆ. ದೇಸಾಯಿಯು ರುದ್ರಮ್ಮನಿಗೆ ಅನ್ಯಾಯವನ್ನೇ ಮಾಡುತ್ತಿರುತ್ತಾನೆ.

ದೇಸಾಯಿಯ ಕಿರಿಯ ಹೆಂಡತಿ ಸಾವಿತ್ರಿ ಓದು ಬರಹ ತಿಳಿದವಳಾಗಿದ್ದೂ ತನ್ನ ತಂದೆ ತಾಯಿಯ ಒತ್ತಾಯದಿಂದ ವಿವಾಹವಾಗಿರುತ್ತಾಳೆ. ದೇಸಾಯಿಯು ಮೊದಲ ಹೆಂಡತಿಗೆ ಮಾಡಿದ ಅನ್ಯಾಯವನ್ನೇ ಇವಳಿಗೂ ಮಾಡುವಾಗ ಅವನ ವಿರುದ್ಧ ತಿರುಗಿ ಬೀಳುತ್ತಾಳೆ. ಅವನ ಅನ್ಯಾಯವನ್ನು ಎತ್ತಿತೋರಿಸುವಳು. ಚಾಜದ ವಿರುದ್ಧ ಮಾತನಾಡುವಳು. ದೇಸಾಯಿ ಅವಳನ್ನು ಗಯ್ಯಾಳಿ ಎಂದು ಹೆದರಿಸಲು ನೋಡಿದಾಗ ಸಾವಿತ್ರಿಯು "ನನ್ನ ನಾಲಗೀ ನನ್ನ ಕೈಯಾಗ ಐತಿ. ನನ್ನ ಕೈಯಿ ನನ್ನ ಬುದ್ಧಿ ಹೇಳದಂಗ ಕೇಳತಾವು. ನಿನ್ನ ಮಾರಿ ನೋಡಿದರ ಊರ ಉದಯಕನ ಈ ವಾಡೇದ ವತನಗಿರಿ ಮಾರತಿದ್ದ್ಯ. ಆದ್ರ ಹೆಂತವರ ಮಗಳು ಅಂತ ಅನಸಗೋಬಾರದು ಅನ್ನುದುಕ್ಕಿಂತ ಹ್ಯಾಂಗ ಬದುಕಬೇಕು ಅನ್ನುದ ನನಗೆ ಗೊತ್ತಿರುವುದರಿಂದ ನೀ ಇಟ್ಟಂಗ ಅದೀನಿ ತಿಳಕೋ. ಇದ ಮುಂದುವರಿದ್ರ ಬೇಸಿ ಇರಗಿಲ್ಲ ನೋಡು"[5] ಎಂದು ದೇಸಾಯಿಗೆ ತಿರುಗಿಬೀಳುವಳು. ಸಾವಿತ್ರಿ ತಾನು ವಿದ್ಯಾವಂತೆಯಾಗಿ ತನ್ನ ಕುಟುಂಬದ ಘನತೆಯನ್ನು ಕಾಪಾಡಿಕೊಳ್ಳಲು ಅರಿತವಳಾಗಿದ್ದಾಳೆ. ಹಾಗೆಯೇ ಸಮಾಜದಲ್ಲಿ ಮರ್ಯಾದೆಯಿಂದ ಬದುಕುವುದನ್ನು ಕಲಿತವಳಾಗಿದ್ದಾಳೆ. ಮೊದಲ ಹೆಂಡತಿಯ ಹಾಗೆ ಪತ್ನೀಧರ್ಮಕ್ಕೆ ಕಟ್ಟುಬೀಳದೆ ಅನ್ಯಾಯವನ್ನು ಎದುರಿಸಿ ಮಾತನಾಡುತ್ತಾಳೆ. ಆದರೆ ಇಬ್ಬರೂ ಪತ್ನಿಯರಿಗೂ ದೇಸಾಯಿ ಅನ್ಯಾಯ ಮಾಡುವುದಲ್ಲದೇ ಊರ ಹೆಣ್ಣುಮಕ್ಕಳಿಗೂ ಅನ್ಯಾಯವೆಸುಗುತ್ತಿರುತ್ತಾನೆ. ಇಲ್ಲಿ ಎಲ್ಲಾವರ್ಗದ ಹೆಣ್ಣುಮಕ್ಕಳಿಗೂ ಅನ್ಯಾಯವೇ ಆಗಿದೆ.

ಹೆಣ್ಣಿಗೆ ಅನ್ಯಾಯವೆಸಗುವ 'ಚಾಜ' ಮತ್ತು ಮಹಾನವಮಿಯ ದಿನದಂದು ನಡೆಸುವ 'ಮೇಣೆ'ಯಲ್ಲಿ ಕೂತು ನಡೆಸುವ ಮೆರವಣಿಗೆಯನ್ನು ದೇಸಾಯಿಯು ನಿಲ್ಲಿಸಬೇಕು ಎಂದು ಕೆಳವರ್ಗದ ದಲಿತರ ರಮೇಶ ಆದೇಶಿಸುತ್ತಾನೆ. ಇದರಿಂದ ಒಂದು ಬದಲಾವಣೆಗೆ ಸಾಧ್ಯವಾಗಿದ್ದನ್ನು ಕಂಡು ಎಲ್ಲರೂ ಸಂತೋಷಿಸುವಾಗ, ಅವೆರಡೂ ಆಚರಣೆಯನ್ನು ದೇಸಾಯಿಯ ಬದಲಿಗೆ ತಾನೇ ನಡೆಸುವುದಾಗಿ ಘೋಷಿಸುವುದು ದುರಂತವೆನಿಸುತ್ತದೆ. ದೇಸಾಯಿಯ ವಿರುದ್ಧ ದ್ವೇಷ ಸಾಧನೆಗಾಗಿ ಈ ನಿರ್ಧಾರ ಮಾಡಿದರೂ, ತಲೆತಲಾಂತರಗಳಿಂದ ಈ ನೋವಿನಲ್ಲೇ ನಡೆದು ಬಂದ ತನ್ನದೇ ಜನತೆಗೆ ಮತ್ತೆ ತಾನೇ ನೋವು ಕೊಡುತ್ತಿರುವುದನ್ನು ಅರ್ಥೈಸಿಕೊಳ್ಳಲು ವಿಫಲನಾಗುವನು. ಮೇಲ್ವರ್ಗ ಆಚರಿಸುವ ಆಚರಣೆಗಳನ್ನು ತಾನು ಆಚರಿಸಿದರೆ ಸಾಂಸ್ಕೃತಿಕವಾಗಿ ಅವರಿಗೆ ಇರುವ ಅಧಿಕಾರವನ್ನು ತಾನು ಪಡೆದ ಹಾಗೆ ಆಗುತ್ತದೆ ಎಂಬ ಭ್ರಮೆಯು ತನ್ನವರ ನೋವನ್ನು ಗುರುತಿಸದ ಹಾಗೆ ಮಾಡುತ್ತದೆ.

ಅದೇ ಸಮುದಾಯದ ಬಸವಣ್ಣ ರಮೇಶನಿಗೆ ಅಧಿಕಾರದ ಅಮಲಿನಲ್ಲಿ ಆತ ಮಾಡುತ್ತಿರುವ ಅನ್ಯಾಯವನ್ನು ಅರ್ಥ ಮಾಡಿಸುತ್ತಾನೆ. ಆದರೆ ರಮೇಶ "ಇಲ್ಲಾ ಈ ವರ್ಷ ಮೇಣೆ ಹೊಂಡತ್ತ. ಅದರಾಗ ನಾನ ಕುಂದರತೀನಿ. ತಲೆ ತಲಾಂತರದಿಂದ ನಮ್ಮ ಜನಕ್ಕಾದ ಅಪಮಾನದ ದೇಡ ತೀರಿಸಿಕೊಂತಿನಿ ಎನ್ನುವನು. ಬಸವಣ್ಣ (ವ್ಯಂಗ್ಯವಾಗಿ ನಕ್ಕು ) ಭಲೇ

ರಮೇಶ ಭಲೇ. ಈಗ ನಿನಗ ಆ ಮೇಣೆದಾಗ ಕುಂತ ನಿನ್ನ ಅಹಂಕಾರಕ್ಕತುಪ್ಪಾಸುರಕೋಬೇಕ ಆಗೇದ ಅಂತ ಹೇಳು. ಇನ್ನೊಬ್ಬ ದೇಸಾಯಿ ಆಗಬೇಕಾಗೇದ ಅಂತ ಹೇಳು. (ಶಾಂತವಾಗಿ) ನಾವು ಸೇಡ ತೀರಿಸಿಕೊಳ್ಳಬೇಕಾಗಿರುವುದು ಮ್ಯಾಲ ಜಾತಿಯವರ ಮ್ಯಾಲಾನು ಅಲ್ಲ ಅವರ ಮಾಡಕೊಂಡ ಬಂದಿರುವ ದೌರ್ಜನ್ಯವನ್ನು ನಾವೂ ಮಾಡಬೇಕ ಅನ್ನುದು ಅಲ್ಲ. ನಮ್ಮ ಬಡತನದ ವಿರುದ್ಧ ನಮ್ಮ , ಅಜ್ಞಾನದ ವಿರುದ್ಧ , ನಮ್ಮ ಹಸಿವಿನ ವಿರುದ್ಧ. ಅದಕ್ಕ ದೇವರು ಧರ್ಮದ ಹೆಸರಿನಲ್ಲಿ ಹಿಂದಿನವರು ಮಾಡಿರುವ ಕಂದಾಚಾರಗಳನ್ನ, ಸಂಪ್ರದಾಯಗಳನ್ನು ನಿಲ್ಲಿಸಬೇಕ ಹೊರ್ತು ಅದಕ್ಕ ಹೊಸಾ ರೂಪಾ ಕೊಟ್ಟ ಸೇಡ ತೀರಿಸಿಕೊಳ್ಳವ ಹಾದರ ಮಾಡಕ ಹೋಗಬ್ಯಾಡ"[6] ಎಂದು ಎಚ್ಚರಿಸುವನು. ಆದರೆ ರಮೇಶ ಬಸವಣ್ಣನ ಮಾತು ಧಿಕ್ಕರಿಸಿ ದೇಸಾಯಿಯ ಮೇಲೆ ಸೇಡು ತೀರಿಸಿಕೊಳ್ಳಲು ಮುಂದಾಗುತ್ತಾನೆ.

ದೇಸಾಯಿ ಮತ್ತು ರಮೇಶ ಇಬ್ಬರ ಕಡೆಯವರೂ ಹೊಡೆದಾಡಿಕೊಳ್ಳಲು ಮುಂದಾಗಿ ಹಲವರು ಗಾಯಾಳುಗಳಾದಾಗ ಇದನ್ನು ತಿಳಿದ ಬಸವಣ್ಣ , ಸಾವಿತ್ರಿಯವರು ಮುಂದೆ ಬಂದು ಹೊಡೆದಾಟವನ್ನು ನಿಲ್ಲಿಸಿ, ಶ್ರೀಮಂತರು ಅಧಿಕಾರವುಳ್ಳವರು ನಿಮ್ಮನ್ನ ಹೊಡೆದಾಡೋಕೆ ಕಳುಹಿಸಿ ಅವರು ನೆಮ್ಮದಿಯಾಗಿದ್ದಾರೆ, ಪ್ರಾಣ ಹಾನಿ ಆಗುವುದೂ ನಿಮ್ಮದೇ, ಗಾಯವಾಗುವುದೂ ನಿಮಗೆ, ನಷ್ಟವಾಗುವುದೂ ನಿಮಗೆ, ತಮ್ಮವರನ್ನು ಕಳೆದುಕೊಳ್ಳುವುದೂ ನೀವೆ. ಜಾತಿ, ಧರ್ಮ, ದೇವರು, ಸುಳ್ಳುಪುರಾಣಗಳಿಂದ ನಿಮ್ಮ ವಿಚಾರಶಕ್ತಿನ ಕೊಂದು ಹಾಕಿದೆ ಎಂದು ಹೇಳುತ್ತಾ ಅವರಿಗೆ ಅರಿವನ್ನು ಮೂಡಿಸುತ್ತಾರೆ. ಯಾವ ಧರ್ಮ ಸಂಸ್ಕೃತಿ ಮನುಷ್ಯರನ್ನು ಕೂಡಿಸಬೇಕಾಗಿತ್ತು, ಅದೇ ಧರ್ಮ ಅದೇ ಸಂಸ್ಕೃತಿ, ಮನುಷ್ಯ ಮನುಷ್ಯರನ್ನು ದೂರ ಮಾಡುವ ಧರ್ಮದ ಸಮಾನತೆಯ ತಳಹದಿಯನ್ನು ಎಲ್ಲರಿಗೂ ಅರ್ಥ ಮಾಡಿಸುತ್ತಾರೆ. ಚಾಜ ಸಂಪ್ರದಾಯವು ಒಂದು ಹೀನ ಸಂಸ್ಕೃತಿಯಾಗಿದ್ದು ಅದನ್ನು ಕಿತ್ತೊಗೆಯಲು ಮುಂದಾಗುತ್ತಾರೆ. ಈ ಪ್ರಯತ್ನ ಮಹಾನವಮಿ ಹಬ್ಬದಲ್ಲಿ ಬನ್ನಿ ಮುಡಿಯುವುದರ ಮೂಲಕ ಪರಸ್ಪರರು ಕಿತ್ತಾಡುವುದನ್ನು ತಪ್ಪಿಸಿ ಒಂದುಗೂಡುವಂತೆ ಮಾಡುತ್ತದೆ. ಬಸವಣ್ಣ ಜನರಿಗೆ ಮನವರಿಕೆ ಮಾಡುವುದಲ್ಲದೆ 'ದೇಸಾಯಿತನ'ಗಳ ವಿರುದ್ಧ ಸಾಂಸ್ಕೃತಿಕ ಬಹುಮುಖ ಸಂಘರ್ಷವನ್ನು ನಡೆಸಿ ಜಾತಿ ಮತ್ತು ರಾಜಕಾರಣ ಆಧಾರಿತ ಯಾಜಮಾನ್ಯ ಸಂಸ್ಕೃತಿಗಳ ಕಾಮುಕತೆ ಮತ್ತು ಕುತಂತ್ರಗಳನ್ನು ಬಯಲು ಮಾಡುತ್ತಾನೆ.

'ಚಾಜ' ನಾಟಕವು ಸಾಂಸ್ಕೃತಿಕ ಸಂಘರ್ಷಾತ್ಮಕ ಅರಿವಿನ ಧಾರೆಗಳ ಚಾರಿತ್ರಿಕತೆ ಮತ್ತು ಸೃಜನಶೀಲತೆಯನ್ನು ಸಮರ್ಥವಾಗಿ ತನ್ನೊಳಗೆ ತಾತ್ವೀಕರಿಸಿಕೊಂಡಿದೆ. ದಲಿತ, ಮಹಿಳೆಯರಾದಿಯಾಗಿ ದಮನಿತರೆಲ್ಲಾ ತಮ್ಮ ಮೇಲೆ ಏರಿಬರುವ, ಹೇರಲ್ಪಡುವ ಸಾಂಸ್ಕೃತಿಕ ಯಾಜಮಾನ್ಯಗಳೊಂದಿಗೆ ಸಂಘರ್ಷಿಸಿ ಜೀವನದ ಅಸ್ತಿತ್ವಕ್ಕಾಗಿ ಜಾತಿ, ಲಿಂಗ, ವರ್ಗಗಳನ್ನೂ ಮೀರಿ ಸಂಘಟಿತರಾಗಬೇಕೆಂಬುದು ಈ ನಾಟಕದ ಆಶಯವಾಗಿದೆ.

## ಕೊನೆ ಟಿಪ್ಪಣಿಗಳು:

1. ಮಲ್ಲಿಕಾ ಘಂಟಿ. (2015). ಚಾಜ. ಗೌತಮ ಪ್ರಕಾಶನ. ಬಳ್ಳಾರಿ. ಪು.ಸಂ. vii
2. ಮಲ್ಲಿಕಾ ಘಂಟಿ. (2015). ಚಾಜ. ಗೌತಮ ಪ್ರಕಾಶನ. ಬಳ್ಳಾರಿ. ಪು.ಸಂ. 7
3. ಮಲ್ಲಿಕಾ ಘಂಟಿ. (2015). ಚಾಜ. ಗೌತಮ ಪ್ರಕಾಶನ. ಬಳ್ಳಾರಿ. ಪು.ಸಂ. 7-8
4. ಮಲ್ಲಿಕಾ ಘಂಟಿ. (2015). ಚಾಜ. ಗೌತಮ ಪ್ರಕಾಶನ. ಬಳ್ಳಾರಿ. ಪು.ಸಂ. 13
5. ಮಲ್ಲಿಕಾ ಘಂಟಿ. (2015). ಚಾಜ. ಗೌತಮ ಪ್ರಕಾಶನ. ಬಳ್ಳಾರಿ. ಪು.ಸಂ. 57-58
6. ಮಲ್ಲಿಕಾ ಘಂಟಿ. (2015). ಚಾಜ. ಗೌತಮ ಪ್ರಕಾಶನ. ಬಳ್ಳಾರಿ. ಪು.ಸಂ. 73-74

## ಆಕರ ಗ್ರಂಥ:

1. ಮಲ್ಲಿಕಾ ಘಂಟಿ. (2015). ಚಾಜ. ಗೌತಮ ಪ್ರಕಾಶನ. ಬಳ್ಳಾರಿ.

## ಪರಾಮರ್ಶನ ಗ್ರಂಥಗಳು:

1. ಕರೀಗೌಡ ಬೀಚನಹಳ್ಳಿ. (2015). ಬಸವಣ್ಣ ಪುನಲೇಖ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
2. ಮರುಳಸಿದ್ದಪ್ಪ ಕೆ. (2013). ಆಧುನಿಕ ಕನ್ನಡ ನಾಟಕ. ಅಂಕಿತ ಪುಸ್ತಕ. ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.